## ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಕುಷ್ಟಗಿ.

**ದಿನಾಂಕ 09 ನೇ ಅಕ್ಟೋಬರ್- 2017**

**- ಉಪಸ್ಥಿತರು -**

**ಶ್ರೀ. ಬಿ. ಕೇಶವಮೂರ್ತಿ,** ಬಿ.ಎ., ಎಲ್ ಎಲ್.ಬಿ.,
**ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ. ಕುಷ್ಟಗಿ.**

**ಅಸಲು ದಾವೆ ಸಂಖ್ಯೆ: 257/2013**

**ವಾದಿಯರು :**
1 ಯಲ್ಲವ್ವ ಗಂಡ ಗೋವಿಂದಪ್ಪ ಗೌಡರ, ವಃ 65 ವರ್ಷ,
2 ಪಾರವ್ವ ಉರ್ಫ್ ಪಾರತೆವ್ವ ಗಂಡ ಹನಮಪ್ಪ ತಳವಗೇರಿ, ವಃ 35 ವರ್ಷ,
ಇಬ್ಬರು ಉಃ ಕೃಷಿ, ಸಾಃ ಶಾಖಾಪುರ, ತಾಃ ಕುಷ್ಟಗಿ, ಜಿಃ ಕೊಪ್ಪಳ.
(ವಾದಿಯರ ಪರವಾಗಿ ಶ್ರೀ. ಬಿ.ಕೆ.ಆರ್., ವಕೀಲರು)

**- ವಿರುದ್ಧ -**

**ಪ್ರತಿವಾದಿ :** ಹೊನ್ನವ್ವ ಗಂಡ ಹನಮಪ್ಪ ಮೇಟಿ, ವಃ 40 ವರ್ಷ, ಉಃ ಕೃಷಿ, ಸಾಃ ಶಾಖಾಪೂರ, ತಾಃ ಕುಷ್ಟಗಿ, ಜಿಃ ಕೊಪ್ಪಳ.

(ಪ್ರತಿವಾದಿ ಏಕಪಕ್ಷೀಯರು)

| | |
|---|---|
| ದಾವೆಯನ್ನು ಹೂಡಿದ ದಿನಾಂಕ | : 25-04-2013 |
| ದಾವೆಯ ಸ್ವರೂಪ | : **ಪಾಲುವಿಭಾಗ ಮತ್ತು ಪ್ರತ್ಯೇಕ ಸ್ವಾಧೀನತೆ ಕೋರಿ.** |
| ಸಾಕ್ಷಿಗಳನ್ನು ವಿಚಾರಣೆ ಮಾಡಲು ಪ್ರಾರಂಭಿಸಿದ | |

| | | |
|---|---|---|
| ದಿನಾಂಕ | : | 14-12-2016 |
| ತೀರ್ಪನ್ನು ಉಚ್ಛರಿಸಿದ ದಿನಾಂಕ | : | 09-10-2017 |
| ಒಟ್ಟು ಅವಧಿ | : | ವರ್ಷ/ಗಳು 04 ತಿಂಗಳು/ಗಳು 05 ದಿನ/ಗಳು 14 |

**(ಬಿ.ಕೇಶವಮೂರ್ತಿ)**
ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,
ಕುಷ್ಟಗಿ.

**- ತೀರ್ಪು -**

ವಾದಿಯರು ಈ ದಾವೆಯನ್ನು ದಾವಾ ಸ್ವತ್ತುಗಳಲ್ಲಿ ಒಟ್ಟು 2 /3 ಭಾಗದ ಹಿಸ್ಸಾವನ್ನು ಪ್ರತ್ಯೇಕವಾಗಿ ವಿಭಾಗ ಮಾಡಿ ಕೊಡಿಸಲು ಹೂಡಿರುತ್ತಾರೆ.

2. ವಾದಿಯರ ಈ ಪ್ರಕರಣದ ಸಂಕ್ಷಿಪ್ತ ಸಾರಾಂಶವೇನೆಂದರೆಃ

ವಾದಿಯರ ವಾದ ಪತ್ರದಂತೆ, 1 ನೇ ವಾದಿಯು 2 ನೇ ವಾದಿ ಮತ್ತು ಪ್ರತಿವಾದಿಯ ತಾಯಿಯಾಗಿರುತ್ತಾರೆ. 1 ನೇ ವಾದಿಯ ಗಂಡ ಮೃತಪಟ್ಟ ನಂತರ ಆಕೆಯ ಗಂಡನ ಸಹೋದರರು ತಮ್ಮ ಕುಟುಂಬದ ಸ್ವತ್ತುಗಳಲ್ಲಿ ವಿಭಾಗ ಕೊಡದ ಕಾರಣ ವಾದಿಗಳು ಅಸಲು ದಾವೆ ಸಂಖ್ಯೆ 54/1984 ರಂತೆ ದಾವೆ ಹೂಡಿದ್ದಾಗಿ, ಸದರಿ ದಾವೆಯು ಡಿಕ್ರಿಯಾಗಿ ವಾದಿ ಮತ್ತು ಪ್ರತಿವಾದಿಗಳ ಭಾಗಕ್ಕೆ ಒಟ್ಟಾಗಿ 1/3 ಭಾಗದ ಸ್ವತ್ತು ಬಂದಿರುತ್ತದೆ ಎಂದು ತಿಳಿಸಿರುತ್ತಾರೆ. ನಂತರ ಸದರಿ ದಾವೆಯ ಪ್ರತಿವಾದಿಗಳು ಮೇಲ್ಮನವಿ ಸಲ್ಲಿಸಿದ್ದು, ಸದರಿ ಮೇಲ್ಮನವಿಯು ವಜಾಗೊಂಡಿರುವುದಾಗಿ, ತದನಂತರ ಸದರಿ ಅಸಲು ದಾವೆ ಸಂಖ್ಯೆ 54/1984 ರ

ಪ್ರತಿವಾದಿಗಳು ವಾದಿಗಳಿಗೆ ಒಂದ ಲಕ್ಷ ಚಿಲ್ಲರೆ ಹಣ ನೀಡಿದರು ಎಂದು, ಆದ್ದರಿಂದ 1 ನೇ ವಾದಿಯು ತಮ್ಮ ಗಂಡನ ಕುಟುಂಬದ ಸ್ವತ್ತುಗಳ ಹಕ್ಕನ್ನು ಬಿಟ್ಟುಕೊಟ್ಟಿರುವುದಾಗಿ ತಿಳಿಸುತ್ತಾರೆ. ಮುಂದುವರೆದು, ಸದರಿ ಹಣದಿಂದ ದಾವಾ ಸ್ವತ್ತನ್ನು ಪ್ರತಿವಾದಿಯ ಹೆಸರಿನಲ್ಲಿ ಖರೀದಿ ದಾವಾ ಸ್ವತ್ತಿನಲ್ಲಿ ಜಂಟೀ ಮಾಲೀಕರಾಗಿ ವಾದಿ ಮತ್ತು ಪ್ರತಿವಾದಿಗಳು ಸ್ವಾಧೀನದಲ್ಲಿರುವುದಾಗಿ ತಿಳಿಸುತ್ತಾರೆ. ಮುಂದುವರೆದು, ಪ್ರತಿವಾದಿಯ ಗಂಡ ದಾವಾ ಸಲ್ಲಿಸುವ ಪೂರ್ವದಲ್ಲಿ ವಾದಿಗಳ ಸ್ವಾಧೀನಕ್ಕೆ ಅಡ್ಡಿಪಡಿಸಿದ ಕಾರಣ ವಾದಿಗಳು ದಾವಾ ಸ್ವತ್ತನ್ನು ವಿಭಾಗ ಮಾಡಿಕೊಡುವಂತೆ ಪ್ರತಿವಾದಿಯನ್ನು ಕೇಳಲಾಗಿ ಆಕೆಯು ನಿರಾಕರಿಸಿದ್ದರಿಂದ ಈ ದಾವೆ ತಂದಿರುವುದಾಗಿ ತಿಳಿಸುತ್ತಾರೆ.

3. ದಾವಾ ನೋಂದಾಣಿ ಮಾಡಿಕೊಂಡು ಪ್ರತಿವಾದಿಗೆ ಸಮನ್ಸ್ ಹೊರಡಿಸಿದ್ದು, ಸದರಿ ಸಮನ್ಸ್ ಪ್ರತಿವಾದಿ ಮಗಳಿಗೆ ಜಾರಿಯಾಗಿದ್ದು, ಪ್ರತಿವಾದಿ ಗೈರು ಹಾಜರಾದ ಕಾರಣ ಅವರನ್ನು ಏಕಪಕ್ಷಿಯ ಎಂದು ತೀರ್ಮಾನಿಸಿ, ಪ್ರಕರಣವನ್ನು ವಾದಿಯರ ವಿಚಾರಣೆಗೆ ಕೈಗೆತ್ತಿಕೊಳ್ಳಲಾಯಿತು.

4. ವಾದಿಯರು ಈ ಪ್ರಕರಣವನ್ನು ಸಾಭೀತು ಪಡಿಸಲು 2 ನೇ ವಾದಿ ಸ್ವತಃ PW-1 ಎಂದು ವಿಚಾರಣೆಗೆ ಒಳಪಟ್ಟಿದ್ದು, ತಮ್ಮ ಪರವಾಗಿ ನಿಪಿ. 1 ರಿಂದ 3 ಎಂದು ಮೂರು ದಾಖಲಾತಿಗಳನ್ನು ಗುರುತಿಸಿರುತ್ತಾರೆ. ಪ್ರತಿವಾದಿ ಪರವಾಗಿ ಯಾವುದೇ ಸಾಕ್ಷ್ಯ ಮತ್ತು ಯಾವುದೇ ಸಾಕ್ಷಿ ಇರುವುದಿಲ್ಲ.

5. ವಾದಿಯರ ಪರ ವಾದವನ್ನು ಕೇಳಲಾಯಿತು. ಈ ಪ್ರಕರಣದ ವಾದ ಪತ್ರ ಮತ್ತು ಪ್ರಮಾಣ ಪತ್ರ ಹಾಗೂ ದಾಖಲಾತಿಗಳನ್ನು ಪರಿಶೀಲಿಸಲಾಗಿ ನನ್ನ ಪರಿಗಣೆನೆಗೆ ಈ ಕೆಳಕಂಡ ಅಂಶ ಕಂಡುಬಂದಿರುತ್ತದೆ.

## ಅಂಶಗಳು

1. ವಾದಿಯರು ಈ ದಾವೆಯಲ್ಲಿ ದಾವಾ ಸ್ವತ್ತಿನಲ್ಲಿ ನಮೂದಿಸಿರುವ 2/3 ಭಾಗದ ಸ್ವತ್ತುಗಳಿಗೆ ಅರ್ಹರೇ **?**
2. ಯಾವ ಆದೇಶ ಅಥವಾ ಡಿಕ್ರಿ **?**

6. ಮೇಲ್ಕಂಡ ಎರಡು ಅಂಶಗಳಿಗೆ ಕೆಳಕಂಡಂತೆ ಉತ್ತರಿಸುತ್ತೇನೆಃ

ಅಂಶ. 1 ಃ ಸಕಾರಾತ್ಮಕವಾಗಿ.

ಅಂಶ. 2 ಃ ನನ್ನ ಅಂತಿಮ ಆದೇಶದಂತೆ.

## ಕಾ ರ ಣ ಗ ಳು

7. **ಅಂಶ-1ಃ-** ಈ ಪ್ರಕರಣದಲ್ಲಿ ವಾದಿಯರು ಮತ್ತು ಪ್ರತಿವಾದಿಯ ಸಂಬಂಧವನ್ನು ಎಲ್ಲಿಯೂ ನಿರಾಕರಿಸಿರುವುದಿಲ್ಲ, ಆದ್ದರಿಂದ ವಾದಿಯರು ಮತ್ತು ಪ್ರತಿವಾದಿಯು ಒಂದೇ ಕುಟುಂಬದ ಸದಸ್ಯರು ಎಂಬುದನ್ನು ನಂಬಬೇಕಾಗುತ್ತದೆ. ಅದೇ ರೀತಿ ಈ ಪ್ರಕರಣದಲ್ಲಿ ವಾದಿಯರು ದಾವಾ ಸ್ವತ್ತು ಒಟ್ಟು ಕುಟುಂಬದ ಸ್ವತ್ತುವಿನಿಂದ ಬಂದ ಹಣದಿಂದ ಪ್ರತಿವಾದಿಯ ಹೆಸರಿನಲ್ಲಿ ಖರೀದಿಸಿರುವುದಾಗಿ ತಿಳಿಸುತ್ತಾರೆ. ಆದರೆ, ಸದರಿ ಕ್ರಯ ಪತ್ರವನ್ನು ಹಾಜರುಪಡಿಸಿರುವುದಿಲ್ಲ, ವಾದಿಗಳು ಹಾಜರುಪಡಿಸಿರುವ ನಿಪಿ - 1 ಪಹಣಿ ಪತ್ರಿಕೆಯನ್ನು ಪರಿಶೀಲಿಸಿದಾಗ ದಾವಾ ಸ್ವತ್ತನ್ನು ದಿನಾಂಕ 20-10-2000 ದಲ್ಲಿ ಖರೀದಿಸಿರುವುದು ಮತ್ತು ದಾವಾ ಸ್ವತ್ತಿನ ಖಾತೆಯು ಪ್ರತಿವಾದಿಯ ಹೆಸರಿನಲ್ಲಿರುವುದು ಕಂಡುಬರುತ್ತದೆ. ಸದರಿ

ಸ್ವತ್ತನ್ನು ಖರೀದಿಸಲು ವಾದಿಗಳು ಹಣ ಒದಗಿಸಿರುತ್ತಾರೆ ಎಂಬ ಬಗ್ಗೆ ಯಾವುದೇ ದಾಖಲಾತಿಗಳು ಇರುವುದಿಲ್ಲ. ಆದರೂ ವಾದಿಗಳ ಮೌಖಿಕ ಸಾಕ್ಷ್ಯದ ಆಧಾರದ ಮೇಲೆ ಮತ್ತು ಪ್ರತಿವಾದಿಯು ಈ ಅಂಶವನ್ನು ನಿರಾಕರಿಸದಿರುವುದರಿಂದ ವಾದಿಗಳು ಸಹ ಹಣ ನೀಡಿರುತ್ತಾರೆ ಎಂದು ನಂಬಬಹುದಾಗಿದೆ.

8. ವಾದಿಗಳು ಹಾಜರುಪಡಿಸಿರುವ ನಿಪಿ - 2 ಮತ್ತು 3 ಅಸಲು ದಾವಾ ಸಂಖ್ಯೆ 54/1984 ರ ತೀರ್ಪಿನ ಪ್ರತಿ ಮತ್ತು ಡಿಕ್ರಿಯನ್ನು ಪರಿಶೀಲಿಸಿದಾಗ ವಾದಿಗಳು ಮತ್ತು ಪ್ರತಿವಾದಿ ಸೇರಿ ಸದರಿ ದಾವೆ ಸಲ್ಲಿಸಿರುವುದು ಮತ್ತು ಸದರಿ ದಾವೆಯು ಅವರ ಪರವಾಗಿ ಆಗಿರುವುದು ಕಂಡುಬರುತ್ತದೆ. ವಾದಿಗಳು ಹೇಳುವಂತೆ ಸದರಿ ದಾವೆಯ ಸ್ವತ್ತುಗಳನ್ನು 1 ನೇ ವಾದಿಯ ಗಂಡನ ಸಹೋದರರಿಗೆ ಬಿಟ್ಟುಕೊಟ್ಟು ಸದರಿ ಹಣದಿಂದ ದಾವಾ ಸ್ವತ್ತನ್ನು ಖರೀದಿಸಿರುವುದಾಗಿ ತಿಳಿಸುತ್ತಾರೆ. ಈ ಸಂಗತಿಗಳನ್ನು ಅಲ್ಲಗಳೆಯಲು ಸಾಧ್ಯವಿರುವುದಿಲ್ಲ. ವಾದಿಗಳು ಮತ್ತು ಪ್ರತಿವಾದಿಯು ಸದರಿ ಹಣದಿಂದ ದಾವಾ ಸ್ವತ್ತನ್ನು ಖರೀದಿಸಿರುತ್ತಾರೆ ಎಂಬುದನ್ನು ನಂಬಲು ಅಡ್ಡಿ ಇರುವುದಿಲ್ಲ.

9. ಪ್ರತಿವಾದಿಯು ಈ ಪ್ರಕರಣದಲ್ಲಿ ಭಾಗಿಯಾಗಿ ತಮ್ಮ ಪ್ರತಿವಾದ ಪತ್ರವನ್ನು ಸಲ್ಲಿಸಿ, ದಾವಾ ಸ್ವತ್ತು ತಾನು ಸ್ವತಃ ಖರೀದಿಸಿರುವುದಾಗಿ ತಿಳಿಸಿ, ಪ್ರಕರಣವನ್ನು ಸ್ಪರ್ಧಿಸಿರುವುದಿಲ್ಲ, ಆದ್ದರಿಂದ ವಾದಿಯರ ವಾದ ಪತ್ರವನ್ನು ಅಲ್ಲಗಳೆಯುವ ಪ್ರತಿವಾದ ಪತ್ರವಿರುವುದಿಲ್ಲ,

10. ಮೇಲ್ಕಂಡ ಕಾರಣಗಳಿಂದ ದಾವಾ ಸ್ವತ್ತು ವಾದಿಗಳು ಮತ್ತು ಪ್ರತಿವಾದಿಯ ಜಂಟೀ ಮಾಲೀಕತ್ವಕ್ಕೆ ಸೇರಿದ ಸ್ವತ್ತು ಎಂದು ಪರಿಗಣಿಸಿದೆ. ಆದ್ದರಿಂದ ವಾದಿಗಳು ಮತ್ತು ಪ್ರತಿವಾದಿಗೆ ದಾವಾ ಸ್ವತ್ತಿನಲ್ಲಿ ಸಮಾನ ಹಕ್ಕು ಇರುತ್ತದೆ. ಅದರಂತೆ ದಾವಾ ಸ್ವತ್ತಿನಲ್ಲಿ ವಾದಿಗಳು ಒಟ್ಟಾಗಿ 2/3 ನೇ ಭಾಗದ ಸ್ವತ್ತನ್ನು ಮತ್ತು ಪ್ರತಿವಾದಿಯು 1/3 ನೇ ಭಾಗದ ಸ್ವತ್ತನ್ನು ಪಡೆಯಲು ಅರ್ಹರಿರುತ್ತಾರೆ. ಅದರಂತೆ ಅಂಶ 1 ನ್ನು ಸಕಾರಾತ್ಮಕವಾಗಿ ಉತ್ತರಿಸುತ್ತೇನೆ.

11. <u>**ಅಂಶ-2:-**</u> ಮೇಲ್ಕಂಡ ಚರ್ಚೆಯಿಂದ ಅಂಶ 2 ಕ್ಕೆ ಈ ಕೆಳಕಂಡಂತೆ ಉತ್ತರಿಸುತ್ತೇನೆಃ

## <u>ಆದೇಶ</u>

ವಾದಿಯರ ದಾವೆಯನ್ನು ಈ ಮೂಲಕ ಡಿಕ್ರಿ ಮಾಡಲಾಗಿದೆ.

ವಾದಿಗಳು ದಾವಾ ಸ್ವತ್ತುಗಳಲ್ಲಿ ಒಟ್ಟಾಗಿ 2/3 ಭಾಗದ ಸ್ವತ್ತಿನ ಹಕ್ಕುವುಳ್ಳವರೆಂದು ಈ ಮೂಲಕ ಘೋಷಿಸಿದೆ.

ಖರ್ಚಿನ ಬಗ್ಗೆ ಯಾವುದೇ ಆದೇಶ ಇಲ್ಲಾ.

ಮೇಲ್ಕಂಡಂತೆ ಪ್ರಾಥಮಿಕ ಡಿಕ್ರಿ ಬರೆಯಿರಿ.

(ಉಕ್ತಲೇಖನವನ್ನು ಶೀಘ್ರಲಿಪಿಗಾರನಿಗೆ ಕೊಟ್ಟು, ಅವರು ಬೆರಳಚ್ಚು ಮಾಡಿದ ನಂತರ ಓದಿ, ತಿದ್ದಿ, ಸಹಿ, ಮಾಡಿ ನಂತರ ಇಂದು ದಿನಾಂಕ **09 ನೇ ಅಕ್ಟೋಬರ್- 2017** ರಂದು ಮುಕ್ತ ನ್ಯಾಯಾಲಯದಲ್ಲಿ ಉದ್ಘೋಷಿಸಲಾಯಿತು)

**(ಬಿ.ಕೇಶವಮೂರ್ತಿ)**
ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,
ಕುಷ್ಟಗಿ.

## ಅನುಬಂಧ

1. **ವಾದಿ ಪರ ವಿಚಾರಣೆ ಮಾಡಲಾದ ಸಾಕ್ಷಿಗಳ ವಿವರಃ**

   PW-1 **:** ಪಾರವ್ವ ಉರ್ಫ್ ಪಾರತೆವ್ವ ಗಂಡ ಹನಮಪ್ಪ ತಳವಗೇರಿ.

2. **ವಾದಿಗಳ ಪರ ಗುರ್ತಿಸಲಾದ ದಾಖಲೆಗಳ ವಿವರಃ**

   ನಿಪಿ. 1 ಃ ಪಹಣಿ ಪತ್ರಿಕೆ.

   ನಿಪಿ. 2 ಃ ಓ.ಎಸ್. 54/84 ರ ತೀರ್ಪಿನ ನಕಲು.

   ನಿಪಿ. 3 ಃ ಓ.ಎಸ್. 54/84 ರ ಡಿಕ್ರಿ ರ ಡಿಕ್ರಿಯ ನಕಲು.

3. **ಪ್ರತಿವಾದಿಗಳ ಪರ ವಿಚಾರಣೆ ಮಾಡಲಾದ ಸಾಕ್ಷಿಗಳ ವಿವರಃ**

   --- ಯಾರು ಇಲ್ಲ ---

4. **ಪ್ರತಿವಾದಿಗಳ ಪರ ವಿಚಾರಣೆ ಗುರ್ತಿಸಲಾದ ದಾಖಲೆಗಳ ವಿವರಃ**

   --- ಏನು ಇಲ್ಲ ---

**(ಬಿ.ಕೇಶವಮೂರ್ತಿ)**
ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,
ಕುಷ್ಟಗಿ.